# ಪೂರ್ವಾಂಗನೆ–ಪಶ್ಚಿಮಾಂಗನೆಗೆ: ಕವಿತೆಯ ಒಳನೋಟಗಳು.

**ಶ್ರೀಮತಿ ಲಲಿತಾ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಎಸ್.ಪಿ.ಎಸ್.ಜಿ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕನಕಗಿರಿ, ಕೊಪ್ಪಳ.

**Article Link: https://aksharasurya.com/2023/07/lalita/**

'ಕಾವ್ಯಾನಂದ' ಎಂಬ ಕಾವ್ಯನಾಮದಿಂದ ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಪರಿಚಿರಾಗಿರುವ ಸಿದ್ದಯ್ಯ ಪುರಾಣಿಕರ ಕವನವಿದು. ಈ ಕವನವು–ಪ್ರಕೃತಿ ಸಹಜವಾದ ಚಹರೆಗಳನ್ನು ಪ್ರಶ್ನಿಸಿ 'ವರ್ಣಭೇದ' ನೀತಿಯನ್ನು ಖಂಡಿಸುತ್ತಾ ಜೀವನದ ಸಾಮರಸ್ಯ, ಸೌಹಾರ್ದತೆಯನ್ನು ಪ್ರತಿನಿಧಿಸುತ್ತದೆ. 'ನಾ ಕರಿಯಳೆಂದು ನೀ ಜರೆಯಬೇಡ ಬಿಳಿಗೆಳತಿ ಗರ್ವದಿಂದ ಕಪ್ಪಿಗಿಂತ ಬಿಳಿಬಣ್ಣ ಹೆಚ್ಚು ಹೇಳಾವ ಹಿರಿಮೆಯಿಂದ' ಕವಿತೆ ಆರಂಭವಾಗುತ್ತದೆ.

ಬಿಳಿಯ ಮೋಡವು ಭೂಮಿಗೆ ಕೇವಲ ಬೆಡಗು ಅಂದ ಚಂದ ನೀಡಿದರೆ, ಕಪ್ಪು ಮೋಡ ಮಳೆಯ ಸಂಕೇತವಾಗಿ ಭೂಮಿಗೆ ಬೀಳುವುದರ ಮೂಲಕ ಈಡೀ ಭೂಮಂಡಲದ ಸಕಲ ಜೀವರಾಶಿಗಳಿಗೆ ಜೀವ ತುಂಬುವುದು. ಕಣ್ಣಿನ ದೃಷ್ಟಿ ಗೋಚರಿಸುವುದು ಕರಿಯಾಲಿಯಿಂದಲೇ ಕುರುಡು ಬರಿ ಬಿಳಿಪಿನಿಂದ. ವಯಸ್ಸಿನ ಸೂಚನೆ ಬಿಳಿಗೂದಲು, ಯೌವ್ವನದ ವಿಜಯಧ್ವಜವು ಕಪ್ಪು ನೆಲದಲ್ಲಿ ಬೆಳೆಯುವ ಹತ್ತಿಯಿಂದಲೇ ನಾವು ಧರಿಸುವ ಬಟ್ಟೆ ಉತ್ಪತ್ತಿಯಾಗುವುದು. ಬಿಳಿಯ ಮಂಜಿನಿಂದ (ಹಿಮಗಡ್ಡೆ) ಬೆಳೆಯಲು ಸಾಧ್ಯವೇ? ಬೆಳೆಯುವುದಲ್ಲೆವೂ ಕಪ್ಪು ಕಪ್ಪು! ಹೀಗಾಗಿ ವರ್ಣ ತಾರತಮ್ಯತೆ ಉರುಳಿಲ್ಲದ್ದು, ಹಿರಿಮೆ ಇರುವುದಿಲ್ಲವೂ ಕಪ್ಪು ಬಣ್ಣದಲ್ಲಿಯೇ.

ರಾತ್ರಿ–ಹಗಲು ಪ್ರಕೃತಿಯಲ್ಲಿ ಜರುಗುವ ವಿದ್ಯಮಾನಗಳಲ್ಲಿ ಕಪ್ಪು ಉದಯವಾದರೆ, ಬಿಳಿ ಅಸ್ತಮಾನವಾಗಿದೆ. ಕಪ್ಪು ಮುಂದುವರೆದು ಹೇಳುತ್ತದೆ, ಇಲ್ಲಿವರೆಗೆ ನಾನು ಜೀವಕಳೆ, ಫಲವಂತಿಕೆ, ದೃಷ್ಠಿ, ಯೌವ್ವನ, ಸಮೃದ್ಧಿಯ ಸಂಕೇತವಾಗಿದೆ, ಆದರೆ ನೀನೆ ಈಗ ತಾವರೆಯಾಗುವುರೊಂದಿಗೆ ಮಾತೃ ದೇವತೆ ನದಿಗಳ ಜನನಕ್ಕೆ ಮೂಲ, ಜೀವದಾಯಕ, ಭೂಮಿ, ಸೃಷ್ಠಿ, ಪ್ರಾಣ ಚೈತನ್ಯ ಸ್ವಯಂ ಸೃಷ್ಠಿಶೀಲ, ವಿಶ್ವದ ಪ್ರಮುಖ ಪ್ರಕ್ರೀಯೆಯಾಗು ಅಲ್ಲದೇ ಬುದ್ಧನು ಹುಟ್ಟಿದಾಗ ಅದನ್ನು ಜಗತ್ತಿಗೆ ಸಾರಲು ಕಮಲದ ಹೂ ಹುಟ್ಟಿತೆಂಬ ಪ್ರತೀತಿ ಇದೆ. ಅಂತಹ

'ಜ್ಞಾನೋದಯದ ಬೆಳಕು' ನೀನಾಗು. ನಾನು ಬಿಳಿಯ ಬಣ್ಣದ ಸುಗಂದಭರಿತವಾದ ನೈದಿಲೆಯಾಗುವೆ. ಹೀಗೆ ಅದಲು–ಬದಲಾಗಿಯಾದರೂ ಇರುವ ನಾವಿಬ್ಬರು ಒಂದೇ ಜಲದಲ್ಲಿ ಭೇದ–ಭಾವಗಳಿರದೆ ತಾಳ್ಮೆಯಿಂದ.

'ಬಿಳಿ' ಪಡುವ ಹೆಮ್ಮೆ ಎಲ್ಲವೂ ಯಾಂತ್ರಿಕವಾದುದು, ಕಬ್ಬಿಣ, ಯಂತ್ರಗಳು, ಕಲ್ಲಿದ್ದಲೂ, ವಾಹನದ ಗಾಲಿ, ಅದರುಸಿರು, ಡಾಂಬರಿನ ಬೀದಿ ಇವುಗಳೊಂದಿಗೆ 'ದುಡಿಯುವ ಕೈಗಳು' ಕಪ್ಪು. ಹೀಗಿರುವಾಗ ಕಪ್ಪು ಪ್ರೀಯವಾಗಿರಬೇಕಿತ್ತು. ಆದರೆ ವಿಪರ್ಯಾಸವೆಂದರೆ ಅಪ್ರೀಯವೇ ಕಪ್ಪು ಎಂದು ಪ್ರಶ್ನಿಸುವ ಮೂಲಕ ಕವಿ ಕವನದ ಒಳರ್ಥದಲ್ಲಿ ಶೋಷಿತರ ದಮನೀತರ ದಲಿತ ವರ್ಗದ ಪರವಾದ ನಿಲುವು ತಾಳುವರು.

ಕವನವು ದಕ್ಷಿಣ ಆಫ್ರಿಕಾದ 'ವರ್ಣಭೇದದ' ನೀತಿಯನ್ನು ನೆನಪಿಗೆ ತರುತ್ತದೆ. ಒಂದು ಕಾಲಘಟ್ಟದಲ್ಲಿ ಕಪ್ಪು ವರ್ಣಿಯರು ದಕ್ಷಿಣ ಆಫ್ರಿಕದಲ್ಲಿ ಬದುಕುವುದಕ್ಕೆ ಅನರ್ಹರಾಗಿದ್ದರು, ಪ್ರಾಣಿಗಳಿಗೆ ನೀಡುವ ಬೆಲೆಯೂ ಅವರಿಗೆ ಸಿಗುತ್ತಿರಲಿಲ್ಲ. ಈ ವರ್ಣಭೇದ ನೀತಿ ಖಂಡಿಸಿದ ಮಹತ್ಮಾ ಗಾಂಧೀಜಿ ಮತ್ತು ಜೀವನವೇ ಕಪ್ಪು ವರ್ಣಿಯರಿಗಾಗಿ ಮುಡುಪಾಗಿಟ್ಟ ನೆಲ್ಸನ್ ಮಂಡೇಲಾ ಜಗತ್ತಿಗೆ ಮಾನವೀಯ ಮೌಲ್ಯಗಳ ಸಾರಿವನ್ನು ಬಿತ್ತಿದರು.

ಭಾರತದಲ್ಲಿ ಪ್ರಚಲಿತದಲ್ಲಿದ್ದಂತಹ ಚಾತುರ್ವರ್ಣ ವ್ಯವಸ್ಥೆಯಲ್ಲಿಯೂ ಈ 'ವರ್ಣಭೇದ ನೀತಿ'ಯ ಕುರುಹುಗಳು ಜಾತಿ ಪದ್ಧತಿಯ ರೂಪದಲ್ಲಿ ಕಂಡು ಬರುತ್ತವೆ. ಈ ವ್ಯವಸ್ಥೆಯಲ್ಲಿ ಶೂದ್ರರನ್ನು ಅತ್ಯಂತ ಕೀಳಾಗಿ ಕಾಣಲಾಗುತ್ತಿತ್ತು. ಸವರ್ಣೀಯರ ಸಕಲ ಸೇವೆಗಳಿಗೂ ಶೂದ್ರರು ಬೇಕು. ಆದರೆ ಅವರನ್ನು 'ಮನುಷ್ಯ' ರಂತೆ ನಡೆಸಿಕೊಳ್ಳುತ್ತಿರಲಿಲ್ಲ. ಯಾವುದೋ ಒಂದು ಜನಾಂಗ ತನ್ನ ಶ್ರೇಯೋಭಿವೃದ್ಧಿಗಾಗಿ ಈ ಶೂದ್ರರನ್ನು ಪ್ರಾಣಿಗಳಿಗಿಂತ ತುಚ್ಛವಾಗಿ ಕಾಣುತ್ತಿದ್ದರು. ಜೀತ ಪದ್ಧತಿ ವ್ಯವಸ್ಥೆಗೆ ಒಳಪಟ್ಟ ಇವರು ಜೀವನದುದ್ದಕ್ಕೂ ಬೇರೊಬ್ಬರ ಸಂತೋಷಕ್ಕಾಗಿ ದುಡಿಯಬೇಕು ಇಲ್ಲವೇ ಆಹಾರವಿಲ್ಲದೆ ಸಾಯಬೇಕು. ಡಾ.ಶಿವರಾಂ ಕಾರಂತರ 'ಚೋಮನ ದುಡಿ' ಕಾದಂಬರಿಯ ಚೋಮ ಬದುಕಿನುದ್ದಕ್ಕೂ ತುಂಡು ಭೂಮಿಗೆ ಒಡೆಯನಾಗಬೇಕೆಂಬ ಮಹಾದಾಸೆ ಈಡೀ ಕುಟುಂಬವನ್ನೇ ಬಲಿ ತೆಗೆದುಕೊಂಡಿತೆ ವಿನಃ ಅವನ ಆಸೆ ಈಡೇರಲಿಲ್ಲ.

ಈ ಜಗತ್ತಿನಲ್ಲಿ ಬೃಹದಾಕಾರದ, ಮನಮೋಹಕವಾದ, ವಿಸ್ಮಯಕಾರವಾದ ಕಲೆ–ವಾಸ್ತು ಶಿಲ್ಪ, ಅರಮನೆ, ಕೋಟೆ–ಕೊತ್ತಲು, ಕಟ್ಟಡಗಳು, ಆಣೆಕಟ್ಟುಗಳು

ಎಲ್ಲವೂ ನಿರ್ಮಾಣವಾಗಿರುವುದು ಕಪ್ಪು ಕೈಗಳಿಂದಲೇ ಹೊರತು ಬಿಳಿ ಕೈಗಳಿಂದಲ್ಲ.

ಆ ಕಾರಣಕ್ಕಾಗಿಯೇ ಕೊಡು–ಕೊಳ್ಳುವಿಕೆ ಅನಿವಾರ್ಯ–ಅವಶ್ಯಕವು ಹೌದು ಹೀಗಿರುವಾಗ ಯಾವುದೇ ಭೇದಭಾವ ಎನಿಸದೇ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪನ ಮಾತಿನ ತಾತ್ಪರ್ಯವನ್ನು ಅರಿತುಕೊಳ್ಳಬೇಕು. ಸೌಂದರ್ಯ, ಶೃಂಗಾರ ಎಂಬುದು ಕೇವಲ 'ಬಿಳಿ' ಬಣ್ಣದಲ್ಲಿ ಇಲ್ಲವೇ ಇಲ್ಲ. ನಾವುಗಳು ನೋಡುವ ವಿಶಾಲ ಮನೋಭಾವದ ದೃಷ್ಟಿಕೋನದಲ್ಲಿದೆ. ಅಜ್ಞಾನ, ಅಂಧಕಾರ, ಮೂಢನಂಬಿಕೆಗಳನ್ನು ತೊರೆದು 'ಉದಾತ್ತ ಚಿಂತನೆಗಳನ್ನು' ಮೈಗೂಡಿಸಿಕೊಳ್ಳಬೇಕು.

ಕಪ್ಪು ಬಿಳಿಗೆ ಹೇಳುತ್ತದೆ. ಕೆಂಪು ಕೇಡು ಎಂಬ ಭಾವ ಬಿಡು ಹಳದಿ ತ್ಯಾಜ್ಯವೆಂಬ ವಾದವನ್ನು ನಿಲ್ಲಿಸು. ಮನುಷ್ಯನ ಆರೋಗ್ಯದ ಹೆಗ್ಗುರುತೆ ದೇಹದಿಂದ ತ್ಯಾಜ್ಯವನ್ನು ಹೊರಹಾಕುವುದರಲ್ಲಿ ಅಡಗಿದೆ. ಕಪ್ಪು–ಕಪ್ಪು ಎಂಬ ನಿನ್ನ ಕೀಳರಿಮೆ ನೋಟಕ್ಕೆ ಹಚ್ಚುವೆನು ಬಾರೆ ಕಾಡಿಗೆಯನ್ನು ಆಗ ನೋಡು ಕನ್ನಡಿಯಲ್ಲಿ ನಿನ್ನ ಚೆಂದದ ಪರಿಯನು.

ಭಾರತದ ಅತ್ಯುತ್ತಮ ಹಸುವಿನ ತಳಿಗಳಲ್ಲಿ ಕಪಿಲೆಯೂ ಒಂದು, ಅಲ್ಲದೇ ಆಧ್ಯಾತ್ಮಿಕ ಸೊಬಗಿಗೆ ಹಾಗೂ ಪೂಜೆಗೆ ಅತ್ಯಂತ ಗೌರವಾನ್ವಿತೆ. ಈ ಹಸುವಿನ ಬಣ್ಣ ಕಪ್ಪು, ಆದರೆ ಹಾಲು ಬಿಳಿಯಾಗಿದೆ. ಆ ಬಿಳಿಯ ಹಾಲೇ ನಿನಾಗು ಎನ್ನುವ ಮೂಲಕ ಕಪ್ಪು ಔದಾರ್ಯತೆಯನ್ನು ಮೆರೆಯುತ್ತದೆ. ನೀನು ಗಂಡು ಮೃಗವಾದರೆ ನಾನು ನಿನ್ನ ಉದರದಲ್ಲಿ ಸುವಾಸನೆ ಉಳ್ಳ ಪದಾರ್ಥವಾಗುವೆ. ಆಗ ಒಬ್ಬ–ರಿಗೊಬ್ಬರು ಮೇಲು–ಕೀಳು ಎಂಬ ಭೇದವಿಲ್ಲದ ಇಬ್ಬರೂ ಪ್ರಮುಖರಾಗೋಣ. ನಾನು ಗಾಢವಾದ ಮಳೆಗೆ ಮುನ್ನವಿರುವ ನೀಲಿ ಮೋಡವಾದರೆ ಆ ಮೋಡದ ಉದರ ಸೀಳಿ ಮಿಂಚಿ ಮರೆಯಾಗುವ ಸೆಳೆಮಿಂಚಾಗು. ನೀನು ಶ್ವೇತ ಪದ್ಮ ನಾನು ನೀಲ ಭೃಂಗ(ದುಂಬಿ) ವಾಗಿ ನಿನ್ನದೆಯ ಮಧುವ ಹೀರುವೆ ಎಂದು ಸರ್ವಕಾಲಿಕ ಸತ್ಯವಾದುದನ್ನು ಕಪ್ಪು ಬಿಳಿಗೆ ತಿಳಿಸುತ್ತಾ ಈ ವರ್ಣ ಮೈತ್ರಿ ಅನಿವಾರ್ಯ ಗೆಳತಿ ಇದೇ ಪ್ರಕೃತಿಯ ನಿಯಮವೂ ಹೌದು ಇದನ್ನೆ ಪ್ರಕೃತಿ ತಿಳಿಸುವುದು. ಇದೇ ಅದರ ರೀತಿ–ನೀತಿ ಈ 'ವಾಸ್ತವಿಕ ನೈಜ್ಯತೆ'ಯನ್ನು ಅರೆತಾಗ ಮಾತ್ರ ಬದುಕು ಬಹಳ ಸುಂದರ. ಜೀವನದುದ್ದಕ್ಕೂ ರಾಗ–ದ್ವೇಷ, ಕೋಪ, ಮದ, ಮತ್ಸರ ಹೊತ್ತರೆ ಮತ್ತಷ್ಟು ಹಳದಿ ತ್ಯಾಜ್ಯವಾಗುವೆ. ಅದೇ ಬಿಳಿಯನ್ನು ನೀನು ಮೈ–ಮನಸೆಲ್ಲ ಹೊತ್ತರೆ ಜಗತ್ತಿನ ಶಾಂತಿಯ ಸಂಕೇತವೆನಿಸುವೆ.

ಹಲವಾರು ನದಿಗಳು ಕಪ್ಪು, ಕೆಂಪು, ಬಿಳಿ, ಹಳದಿ, ಕಂದು ವಿವಿಧ ಬಣ್ಣಗಳಲ್ಲಿ ಹರಿದು ಸಾಗರವನ್ನು ಸೇರುವ ಹಾಗೆ, ಜೀವನದಲ್ಲಿ ಕಪ್ಪು–ಬಿಳಿ, ಶ್ರೀಮಂತ–ಬಡವ, ಉಳ್ಳವರು–ಇಲ್ಲದವರು ಸೇರುವುದು ಪ್ರಕೃತಿಯ ವಿಶಾಲವಾದ ಮಡಿಲಲ್ಲಿ ಎಂಬುದನ್ನು ಕವಿ ಈ ಕವನದ ಮೂಲಕ ಸ್ವಾರಸ್ಯವಾಗಿ ವಿವರಿಸಿದ್ದಾರೆ.

ಕಪ್ಪು–ಬಿಳಿಯೊಂದಿಗೆ ಸಮಾನತೆಯ ಸಾಮರಸ್ಯದ ಬದುಕಿಗೆ ತಲೆ–ತಲಾಂತರಗಳಿಂದ ಕಾಯುತ್ತಿರುವುದು, ಇಂದಲ್ಲಾ ನಾಳೆ ಒಳಿತಾಗುವುದೆಂದು ಅದು ಎಷ್ಟರಮಟ್ಟಿಗೆ ಕೈಗೂಡುವುದು ಎಂಬುದನ್ನು ಈ ಕವಿತೆಯನ್ನು ಓದುವ ನಾವುಗಳೇ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು.

ಹೀಗೆ ಕವಿತೆ ಸಹಜವಾದದನ್ನು ಪ್ರಶ್ನಿಸಿ ಉತ್ತರಗಳ ಮೂಲಕ ಸಮಧಾನ ಪಡಿಸುತ್ತದೆ. ಕಪ್ಪು ಅನಿಷ್ಠಕಾರಕ, ಬಿಳಿ ಶುಭಸೂಚಕ ಎಂಬ ಪೂರ್ವಾಗ್ರಹಿತ ದೃಷ್ಟಿ–ನಂಬಿಕೆಗಳು ಅನುಚಿತವಾದವುಗಳು. ರೂಪ, ಅಂದ, ಚಂದ, ದೈಹಿಕತೆಗಳು ಕೇವಲ ಬಹಿರಂಗದೃಷ್ಟಿಗೆ ಗೋಚರವಾಗು ವಂಥವುಗಳು, ಕಾರ್ಯನಿಷ್ಠ–ಸಮಾಜನಿಷ್ಠ–ಫಲನಿಷ್ಠ ಪರಿಣಾಮಗಳಲ್ಲಿ ಮೌಲ್ಯವನ್ನು ಕಾಣ ಬೇಕೆಂಬುದು ಕವಿಯ ಆಶಯವಾಗಿದೆ. ಮನುಷ್ಯ, ಪ್ರಾಣಿ, ಗಿಡ–ಮರ, ನಿಸರ್ಗ ಹೀಗೆ ಎಲ್ಲವುಗಳಲ್ಲಿ ಪರಸ್ಪರ ಸಹಕಾರ, ಸೌಹಾರ್ದತೆಗಳು ಮುಖ್ಯವೆನಿಸಬೇಕೇ ವಿನಾಃ ಅದರ ಹೊರರೂಪಗಳಲ್ಲಲ್ಲ ಎಂಬುದು ಇಲ್ಲಿಯ ವಿಚಾರ. ಆಕಳು ಕಪ್ಪಾಗಿದ್ದರೂ ಹಾಲು ಬಿಳುಪು. ಕಪ್ಪಾದ ಮೋಡ ಭೂಮಿಯನ್ನೇ ಸಮೃದ್ಧಗೊಳಿಸುತ್ತದೆ ಎಂಬ ಹೋಲಿಕೆಗಳನ್ನು ಪ್ರಾತಿನಿಧಿಕವಾಗಿ ಗಮನಿಸಬಹುದು.

**ಆಕರ ಗ್ರಂಥ:**


1. ಕರುಣಾ ಶ್ರಾವಣ (ಕವನ ಸಂಕಲನ (1955).), ಸಿದ್ಧಯ್ಯ ಪುರಾಣಿಕರು.
2. ಸಿದ್ದಯ್ಯ ಪುರಾಣಿಕರ ಸಮಗ್ರ ಸಾಹಿತ್ಯ.
3. ಸಿದ್ದಯ್ಯ ಪುರಾಣಿಕ ಜೀವನ ಚರಿತ್ರೆ, ಪ್ರಭುಸ್ವಾಮಿ ಕಟ್ಟಾವಾಡಿ.
4. ಸಿದ್ದಯ್ಯ ಪುರಾಣಿಕ ಜೀವನ ಚರಿತ್ರೆ, ನಾಗಾಬಾಯಿ ಬುಳ್ಳ.
5. ಸಿದ್ದಯ್ಯ ಪುರಾಣಿಕರು ಸಾಹಿತ್ಯ, ಸಂಗ್ರಹ: ಉದಯ್ ಪುರಾಣಿಕ.